**ಸಿಸಿ ನಂಃ 1939/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 17-03-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಮುಂದುವರಿದ ಪಾಟೀ ಸವಾಲುಃ-ಆರೋಪಿ ಪರ ವಕೀಲರಾದ ಶ್ರೀ ಹೆಚ್.ಎಂ ಎನ್ ರವರಿಂದಃ**

7. ನೀವು ನಿಮ್ಮ ಚಿನ್ನಾಭರಣಗಳನ್ನು ಮಾರಾಟ ಮಾಡಿ ಆರೋಪಿಗೆ ಹಣ ಕೊಟ್ಟಿದ್ದೀರಿ ಅಂತಾ ಹೇಳಿದ್ದು ಆ ರೀತಿ ನಿಮ್ಮ ಬಳಿ ಚಿನ್ನಾಭರಣಗಳು ಇದ್ದವು ಅಂತಾ ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಅಂತಹ ದಾಖಲೆಗಳು ಇದ್ದರೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ರಶೀದಿಗಳು ಇಲ್ಲಾ ಅಂತಾ ಉತ್ತರಿಸುತ್ತಾರೆ. ಆ ರೀತಿ ಚಿನ್ನಾಭರಣಗಳನ್ನು ಮಾರಾಟ ಮಾಡಿದ್ದೀರಿ ಅಂತಾ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ಸಾಕ್ಷಿ ಈ ಹಿಂದೆಯೇ ನನ್ನ ತಾಯಿಗೆ ಅನಾರೋಗ್ಯ ಇದ್ದ ಕಾರಣ ಮಾರಾಟ ಮಾಡಿ ಹಣವನ್ನು ಇಟ್ಟುಕೊಂಡಿದ್ದೆ ಅಂತಾ ಉತ್ತರಿಸುತ್ತಾರೆ. ನೀವು ಹೇಳಿದಂತೆ ಯಾವುದೇ ಚಿನ್ನಾಭರಣಗಳನ್ನು ಮಾರಾಟ ಮಾಡಿ ಹಣ ಇಟ್ಟುಕೊಂಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಸಂಬಂಧಿಕರಿಂದ ಹಣ ಸಂಗ್ರಹಿಸಿ ಆರೋಪಿಗೆ ಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಚಿನ್ನಾಭರಣಗಳನ್ನು ಮಾರಾಟ ಮಾಡಿ ಹಾಗೂ ಸಂಬಂಧಿಕರಿಂದ ಹಣವನ್ನು ಸಂಗ್ರಹಿಸಿ ಆರೋಪಿಗೆ ಹಣ ಕೊಟ್ಟ ವಿಷಯವನ್ನು ನಿಮ್ಮ ವಕೀಲರ ನೋಟಿಸಿನಲ್ಲಾಗಲೀ, ಫಿರ್ಯಾದಿಯಲ್ಲಾಗಲೀ,ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ, ನಮೂದಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ನಮೂದಿಸಲು ನಿಮಗೆ ಇರಲಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರಲಿಲ್ಲ ಅಂತಾ ಉತ್ತರಿಸುತ್ತಾರೆ. ನೀವು ಚಿನ್ನಾಭರಣಗಳನ್ನು ಮಾರಾಟ ಮಾಡದೇ ಇರುವುದರಿಂದ ಹಾಗೂ ಸಂಬಂಧಿಕರಿಂದ ಹಣವನ್ನು ಸಂಗ್ರಹಿಸದೇ ಇರುವುದರಿಂದ ಆ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ.

8. ನಿಮ್ಮ ಹಾಗೂ ಆರೋಪಿಯ ನಡುವೆ ಈವರೆಗೆ ಎಷ್ಟು ವ್ಯವಹಾರಗಳು ನಡೆದಿವೆ ಎಂದರೆ ಸಾಕ್ಷಿ ಒಂದೇ ವ್ಯವಹಾರ ಆಗಿರುವುದು ಅಂತಾ ಉತ್ತರಿಸುತ್ತಾರೆ. ನನ್ನ ಪ್ರಕಾರ ಈ ಫಿರ್ಯಾದಿಯಲ್ಲಿ ಉಲ್ಲೇಖಿಸಿರುವ ವ್ಯವಹಾರ ಹೊರತು ಪಡಿಸಿ ಆರೋಪಿಯೊಂದಿಗೆ ಬೇರೆ ವ್ಯವಹಾರ ಆಗಿರುವುದಿಲ್ಲ .

9. ಈ ಹಿಂದೆ ಆರೋಪಿ ನನ್ನ ಬಳಿ ರೂ. 1,00,000/- ರಿಂದ 1,50,000/- ಹಣ ಪಡೆದುಕೊಂಡಿದ್ದು ಅದನ್ನು ಮರುಪಾವತಿ ಮಾಡಿರುತ್ತಾರೆ. ನೀವು ಬಡ್ಡಿ ವ್ಯವಹಾರ ಮಾಡುತ್ತೀರಿ ಎಂದರೆ ಸುಳ್ಳು. ನೀವು 2023 ರಲ್ಲಿ ಆರೋಪಿಗೆ ರೂ. 1,50,000/- ಬಡ್ಡಿಯ ಮೇಲೆ ಸಾಲ ನೀಡಿದ್ದೀರಿ ಎಂದರೆ ಸುಳ್ಳು . ಆ ಸಂಧರ್ಭದಲ್ಲಿ ಆರೋಪಿ ಸದ್ರಿ ಸಾಲಕ್ಕೆ

ಭದ್ರತೆಗಾಗಿ ಕೊಟ್ಟ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸುಳ್ಳು. ಆರೊಪಿಯು ಸದ್ರಿ ಸಾಲಕ್ಕೆ ಸಂಬಂಧಿಸಿದಂತೆ ದಿನಾಂಕ 25-05-2023 ರಿಂದ 07-02-2024 ರವರೆಗೆ ಆರೋಪಿಯು ತನ್ನ ಕೆನರಾ ಬ್ಯಾಂಕ್ ಖಾತೆಯಿಂದ ಫೋನ್ ಪೇ ಮೂಲಕ ರೂ. 1,74,700/-ನ್ನು ನಿಮಗೆ ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಸದ್ರಿ ಸಾಲ ಚುಕ್ತಾಗೊಂಡಿದೆ ಅಂತಾ ಉತ್ತರಿಸುತ್ತಾರೆ. ನಂತರ ಆರೋಪಿ ತನ್ನ ಆಕ್ಸೀಸ್ ಬ್ಯಾಂಕ್ ಖಾತೆಯ ಮೂಲಕ ದಿನಾಂಕ 08-06-2023 ರಿಂದ 22-07-2023 ರವರೆಗೆ ಗೂಗಲ್ ಪೇ ಮೂಲಕ ರೂ.91,000/- ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಹಣ ಕೊಟ್ಟಿದ್ದು ಅದನ್ನು ಅವರು ಚುಕ್ತಾ ಮಾಡಿರುತ್ತಾರೆ ಅಂತಾ ಉತ್ತರಿಸುತ್ತಾರೆ. ಆರೋಪಿ ನಿಮ್ಮಿಂದ ಪಡೆದ ರೂ.1,50,000/- ಹಣವನ್ನು ರೂ.2,65,700/-ನ್ನು ಬಡ್ಡಿ ಸಮೇತ ನಿಮಗೆ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ 2023 ರಲ್ಲಿ ನಿಮ್ಮಿಂದ ಪಡೆದುಕೊಂಡು ರೂ.1,50,000/- ಸಾಲವನ್ನು ಬಡ್ಡಿ ಸಮೇತ ಸಂಪೂರ್ಣ ಮರುಪಾವತಿ ಮಾಡಿದ್ದರೂ ಸಹ ನೀವು ಅವರ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

10. ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಗೆ ಒಂದು ಬ್ಯಾಂಕ್ ಸ್ಟೇಟಮೆಂಟನ್ನು ತೋರಿಸಿ ಅದು ಆರೋಪಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಯ ಸ್ಟೇಟಮೆಂಟ ಅಲ್ಲವೇ ಅಂತಾ ಕೇಳಿದ್ದಕ್ಕೆ ಸಾಕ್ಷಿ ಅದನ್ನು ನೋಡಿ ಹೌದು ಅಂತಾ ಒಪ್ಪಿಕೊಂಡಿರುವ ಕಾರಣ ಸದ್ರಿ ಬ್ಯಾಂಕ್ ಸ್ಟೇಟಮೆಂಟನ್ನು **ನಿಡಿ-1** ಅಂತಾ ಗುರುತಿಸಲಾಯಿತು. ನಿಡಿ-1ರ ಪ್ರಕಾರ ದಿನಾಂಕ 25-05-2023 ರಂದು ರೂ. 5,000/- ಹಣವನ್ನು ನಿಮ್ಮ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ದಿನಾಂಕ 26-05-2023 ರಂದು ರೂ. 8,000/-, ದಿನಾಂಕ 29-06-2023 ರಂದು ರೂ. 15,000/- , ದಿನಾಂಕ 06-07-2023 ರಂದು ರೂ.3,000/-, ದಿನಾಂಕ 18-08-2023 ರಂದು ರೂ.25,000/-, ದಿನಾಂಕ 18-08-2023 ರಂದು ರೂ.12,000/-, ದಿನಾಂಕ 29-08-2023 ರಂದು ರೂ.2,000/-, ದಿನಾಂಕ 01-09-2023 ರಂದು ರೂ. 25,000/-, ದಿನಾಂಕ 10-09-2023 ರಂದು ರೂ.10,000/-,ದಿನಾಂಕ 26-09-2023 ರಂದು ರೂ.13,500/-, ದಿನಾಂಕ 30-09-2023 ರಂದು ರೂ.1,000/-, ದಿನಾಂಕ 05-10-2023 ರಂದು ರೂ.20,000/-, ದಿನಾಂಕ 10-10-2023 ರಂದು ರೂ.20,000/-, ದಿನಾಂಕ 11-10-2023 ರಂದು ರೂ.2,000/-,ದಿನಾಂಕ 15-10-2023 ರಂದು ರೂ.15,000/-, ದಿನಾಂಕ 25-10-2023 ರಂದು ರೂ.12,000/-,ದಿನಾಂಕ 28-10-2023 ರಂದು ರೂ.1,500/-, ದಿನಾಂಕ 21-12-2023 ರಂದು ರೂ.2,000/-, ದಿನಾಂಕ 06-02-2024 ರಂದು ರೂ.200/-, ದಿನಾಂಕ 07-02-2024 ರಂದು ರೂ. 300/- ಹಾಗೂ ರೂ.200/-ಒಟ್ಟು ರೂ.500/-ಈ

ರೀತಿ ಒಟ್ಟು ಫೋನ್ ಪೇ ಮೂಲಕ ರೂ.1,74,700/-ಗಳನ್ನು ಹಣವನ್ನು ನಿಮ್ಮ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ.

11. ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಗೆ ಒಂದು ಬ್ಯಾಂಕ್ ಸ್ಟೇಟಮೆಂಟನ್ನು ತೋರಿಸಿ ಅದು ಆರೋಪಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಯ ಸ್ಟೇಟಮೆಂಟ ಅಲ್ಲವೇ ಅಂತಾ ಕೇಳಿದ್ದಕ್ಕೆ ಸಾಕ್ಷಿ ಅದನ್ನು ನೋಡಿ ಹೌದು ಅಂತಾ ಒಪ್ಪಿಕೊಂಡಿರುವ ಕಾರಣ ಸದ್ರಿ ಬ್ಯಾಂಕ್ ಸ್ಟೇಟಮೆಂಟನ್ನು **ನಿಡಿ-2** ಅಂತಾ ಗುರುತಿಸಲಾಯಿತು. ನಿಡಿ-2ರ ಪ್ರಕಾರ ದಿನಾಂಕ 08-06-2023 ರಂದು ರೂ. 20,000/- ಹಣವನ್ನು ನಿಮ್ಮ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ದಿನಾಂಕ 15-06-2023 ರಂದು ರೂ.5,000/-, ದಿನಾಂಕ 16-06-2023 ರಂದು ರೂ.20,000/-, ದಿನಾಂಕ 22-06-2023 ರಂದು ರೂ.25,000/-, ದಿನಾಂಕ 05-07-2023 ರಂದು ರೂ.2,000/-, ದಿನಾಂಕ 08-07-2023 ರಂದು ರೂ.20,000/-,ದಿನಾಂಕ 19-07-2023 ರಂದು ರೂ.10,000/-, ದಿನಾಂಕ 22-07-2023 ರಂದು ರೂ.25,000/- ಈ ರೀತಿ ಒಟ್ಟು ರೂ.91,000/-ಗಳನ್ನು ಗೂಗಲ್ ಪೇ ಮೂಲಕ ಆರೋಪಿ ನನ್ನ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ.

12. ನೀವು ಹಾಜರುಪಡಿಸಿರುವ ಚೆಕ್ಕನ್ನು ಆರೋಪಿಯಿಂದ ಯಾವಾಗ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ದಿನಾಂಕ 05-08-2024 ರಂದು ತೆಗೆದುಕೊಂಡಿದ್ದೇನೆ ಅಂತಾ ಉತ್ತರಿಸುತ್ತಾರೆ. ನೀವು ಹೇಳಿದಂತೆ ದಿನಾಂಕ 05-08-2024 ರಂದು ಆರೋಪಿಯಿಂದ ನೀವು ಚೆಕ್ಕನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಕಾರವಾರ.**